# ಪುಷ್ಪಕ ವಿಮಾನ!

ಇತ್ತೀಚೆಗೆ ಕುಟುಂಬ ಸಮೇತ ಮಂತ್ರಾಲಯದ ಸಮೀಪದ ಪುಣ್ಯಕ್ಷೇತ್ರ ಪಂಚವಟಿಗೆ ತೆರಳಿದ್ದೆ. ಅಲ್ಲಿ ಪಂಚಮುಖಿ ದೇವಸ್ಥಾನದ ಪಕ್ಕದಲ್ಲಿಯೇ ಒಂದರ ಮೇಲೊಂದರಂತೆ ಬಂಡೆಗಳನ್ನು ಜೋಡಿಸಿಟ್ಟಂತಿತ್ತು. ಇದು ಪುಷ್ಪಕ ವಿಮಾನವನ್ನು ಹೋಲುತ್ತದೆ. ಇದು ಪಂಚಮುಖಿ ಆಂಜನೇಯನ ವಾಹನವಾಗಿತ್ತು ಎಂಬ ಪ್ರತೀತಿಯಿದೆ.

**ಚಿತ್ರ- ಬರಹ: ಪ್ರಕಾಶ ಎಸ್. ಮನ್ನಂಗಿ**





# ಮೀನು ಗೂಳಿ

ಸಮುದ್ರ, ನದಿಗಳಿಂದ ಮೀನು ಹಿಡಿಯಲು ಹಗ್ಗದ ನೈಲಾನ್ ದಾರದ ವಿವಿಧ ನಮೂನೆಯ ಬಲೆಯನ್ನು ಉಪಯೋಗಿಸುತ್ತಾರೆ. ಹಿಂದೆ ಬಿದಿರಿನ ಬೆತ್ತಕ್ಕೆ ಗಟ್ಟಿಯಾದ ದಾರ, ಬಳ್ಳಿಯನ್ನು ಕಲಾತ್ಮಕವಾಗಿ ಹೆಣೆದು ಮೀನು ಗೂಳಿ ತಯಾರಿಸುವ ಕ್ರಮವಿತ್ತು. ಇದನ್ನು ನದಿ ನೀರಿನಲ್ಲಿ ಮುಳುಗಿಸಿಟ್ಟರೆ ತೆರೆದ ಭಾಗದಿಂದ ಮೀನು ಹೊಕ್ಕು ಪುನಃ ಹಿಂದಕ್ಕೆ ಬರಲಾರದು. ಹೀಗೆ ಒಂದು ತುದಿಯಲ್ಲಿ ಮುಚ್ಚಿರುವ, ಇನ್ನೊಂದು ತುದಿಯಲ್ಲಿ ತೆರೆದಿರುವ ಮೀನು ಗೂಳಿಯನ್ನು ಈಗಲೂ ಕೆಲವು ಹಳ್ಳಿಗಳಲ್ಲಿ ಕೆರೆ, ನದಿಯ ನೀರಿನಲ್ಲಿ ಮೀನು ಹಿಡಿಯಲು ಉಪಯೋಗಿಸುವರು. ಚಿತ್ರದಲ್ಲಿರುವ ಮೀನು ಗೂಳಿಯನ್ನು ಕುಂದಾಪುರದ ಶಾಲಾ ಶಿಕ್ಷಕ ಶ್ರೀನಿವಾಸರ ವಸ್ತು ಸಂಗ್ರಹಾಲಯದಲ್ಲಿ ಕಾಣಬಹುದು.

**-ಲಕ್ಷ್ಮಣ ಶೆಣೈ ಎನ್., ಬಂಟವಾಳ**

# ಘತ್ತರಗಿಯ ಭಾಗ್ಯವಂತಿ ದೇಗುಲ

ಶ್ರೀಕ್ಷೇತ್ರ ಘತ್ತರಗಿಯು ಕಲಬುರಗಿ ಜಿಲ್ಲೆಯ ಗಾಣಗಾಪುರಕ್ಕೆ ಹತ್ತಿರವಿರುವ ಒಂದು ಪುರಾಣ ಪ್ರಸಿದ್ಧ ಕ್ಷೇತ್ರ. ಇಲ್ಲಿ ಶಕ್ತಿ ದೇವತೆಯಾದ ಶ್ರೀ ಭಾಗ್ಯವಂತಿ ದೇವಿಯ ಪುರಾತನ ಭವ್ಯ ದೇಗುಲವಿದೆ. ದಂತಕತೆಯ ಪ್ರಕಾರ12ನೇ ಶತಮಾನದಲ್ಲಿ ದಕ್ಷಿಣದಿಂದ ಬಂದ ದೇವಿ ಕಲ್ಲಿನ ರೂಪದಲ್ಲಿ ನದಿಯಲ್ಲಿ ತೇಲಿ ಬಂದು ನಂತರ ಹಾವಿನ ರೂಪ ತಾಳಿ ಒಬ್ಬ ರೈತನಿಗೆ ಉಳುಮೆ ಮಾಡುತ್ತಿದ್ದಾಗ ಕಾಣಿಸಿಕೊಳ್ಳುತ್ತಾಳಂತೆ. ಆ ರೈತ ಊರಿನ ಮುಖಂಡನಿಗೆ ವಿಚಾರ ತಿಳಿಸುತ್ತಾನೆ. ಮುಖಂಡ ರೈತನ ಜೊತೆಗೂಡಿ ಹೊಲಕ್ಕೆ ಬಂದು ನೋಡಲಾಗಿ, ದೇವಿ ಮುಖಂಡನಿಗೆ ಅಶರೀರವಾಣಿಯಾಗಿ 'ಈ ಜಮೀನಿನಲ್ಲಿ ನನಗೆ ಇರಲು ಜಾಗ ಕೊಡು. ಇಲ್ಲಿಯೇ ನೆಲಸುತ್ತೇನೆ' ಎನ್ನುತ್ತಾಳೆ. ಅದರಂತೆ ಮುಖಂಡ ಜಮೀನನ್ನು ದೇವಿಗೆ ನೀಡುತ್ತಾನೆ. ಸದ್ಯ ಈ ದೇಗುಲಕ್ಕೆ ಭಕ್ತರ ಪ್ರವಾಹವೇ ಹರಿದು ಬರುತ್ತಿದೆ.

**-ಆರ್.ಎಸ್. ಮಲ್ಲಾರಿ ರಾವ್, ಬೆಂಗಳೂರು**

